ಸಂಗತಿಗಳೇ. ಸಂಸ್ಕೃತಿಯ ಜಗತ್ತು ಇಲ್ಲದಿದ್ದರೆ ಒಬ್ಬ ಮನುಷ್ಯ ಬದುಕುವುದೇ ಕಷ್ಟ. ಅದನ್ನು ನೆಗ್ಲೆಕ್ಟ್ ಮಾಡಿದ್ದೇ ಒಂದು ರೀತಿಯ ಅಜ್ಞಾನ ಮತ್ತು ಅಪರಾಧ ಎಂದು ನನಗನ್ನಿಸುತ್ತೆ.

**◆ ಚಳವಳಿಗಳು ದಾರಿ ತಪ್ಪಲು ಅಥವಾ ಅಲ್ಪಾಯುಷಿಗಳಾಗಲು ಅವೂ ಕೂಡ ಕಾರಣವಲ್ಲವೇ?**

ಹೌದು. ನೂರಕ್ಕೆ ನೂರು ಈ ಮಾತು ಸತ್ಯ. ಡಿ.ಆರ್. ನಾಗರಾಜ್ ಒಂದು ಮಾತು ಹೇಳಿದ್ದಾರೆ. 'ಈ ನೆಲದ ದೇಸಿ ಸಂಸ್ಕೃತಿ ಸಂಗತಿ ಅಥವಾ ಪರಿಕರಗಳೇನಿವೆಯೋ ಅವೇ ನಮ್ಮ ಹತಾರಗಳು.' ಅವು ಹತಾರಗಳಲ್ಲ ಎಂದು ನಾವು ಕೈಚೆಲ್ಲಿ ಕೂತರೆ, ಅವು ಸಂಘ ಪರಿವಾರದವರ ಕೈಯಲ್ಲಿ ಆಯುಧಗಳಾಗಿಬಿಡುತ್ತವೆ. ಈಗ ಆಗಿರುವುದೂ ಅದೇ. ಇವತ್ತು ಎಂಥ ವೈರುಧ್ಯದ ಸ್ಥಿತಿ ನಿರ್ಮಾಣವಾಗಿದೆ ಅಂದರೆ, ರಾಮನನ್ನು ಒಂದು ಐಕಾನ್ ಮಾಡಿಕೊಂಡು ಬಿಜೆಪಿಯವರು ಅಧಿಕಾರ ರಾಜಕಾರಣ ಮಾಡುತ್ತಿದ್ದಾರೆ. ಆದರೆ ರಾಮನ ಇಕ್ಷ್ವಾಕು ವಂಶದವರು ಋಗ್ವೇದಿ ಆರ್ಯರೇ ಅಲ್ಲ. ಬುದ್ಧ ಇಕ್ಷ್ವಾಕು ವಂಶಕ್ಕೆ ಸೇರಿದವನು. ಮಹಾವೀರ ಸೇರಿದಂತೆ 24 ತೀರ್ಥಂಕರರೂ ಕೂಡ ಇಕ್ಷ್ವಾಕು ವಂಶಕ್ಕೆ ಸೇರಿದವರೇ. ಅವರಿಗೂ ಋಗ್ವೇದಕ್ಕೂ ಸಂಬಂಧವೇ ಇಲ್ಲ. ಅವರೂ ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದ ಕ್ಲಾಸ್‌ಗೆ ಸೇರಿದವರಾದರೂ ಕೂಡ ಅವರು ಬಂದಿದ್ದು ಹಿಂದೂ ಕುಶ್ ಪರ್ವತದ ಕಡೆಯಿಂದ. ಅಧಿಕಾರದ ಕಿತ್ತಾಟದಲ್ಲಿ ಆರ್ಯ ಬ್ರಾಹ್ಮಣರು ಮತ್ತು ಕ್ಷತ್ರಿಯರ ನಡುವೆ ಶತಮಾನಗಳ ಕಾಲ ಸಂಘರ್ಷ ನಡೆದು ಪರಶುರಾಮ ಸಾವಿರಾರು ಕ್ಷತ್ರಿಯರನ್ನು ಸಂಹರಿಸಿದ. ಅಂತಹ ಕ್ಷತ್ರಿಯ ವಿರೋಧಿ ಆರ್ಯ ಬ್ರಾಹ್ಮಣ ಪರಶುರಾಮನನ್ನು ರಾಮ ಸೋಲಿಸಿದ. ಆದರೆ, ಈಗ ಋಗ್ವೇದಿ ಆರ್ಯರಿಗೆ ಕ್ಷತ್ರಿಯ ರಾಮನೇ ಅಧಿಕಾರಗ್ರಹಣಕ್ಕೆ ಅನಿವಾರ್ಯವಾಗಿದ್ದಾನೆ.

**◆ ಕನ್ನಡ ಸಾಹಿತ್ಯ ವಲಯದಲ್ಲಿ ಅಲ್ಲಮನಿಂದ ಪ್ರಭಾವಿತರಾದವರ ಒಂದು ಪರಂಪರೆಯೇ ಇದೆ. ಅದರಲ್ಲಿ ನೀವೂ ಕೂಡ ಒಬ್ಬರು. ಅಲ್ಲಮ ನಿಮಗೆ ದಕ್ಕಿದ್ದು ಹೇಗೆ? ಅಲ್ಲಮನನ್ನು ನೀವು ಹೇಗೆ ಸ್ವೀಕರಿಸುತ್ತೀರಿ? ನಿಮ್ಮ ಕಾವ್ಯದಲ್ಲಿನ ಆಧ್ಯಾತ್ಮಿಕ ಅಥವಾ ಮೆಟಫಿಸಿಕಲ್ ಎಲಿಮೆಂಟ್ಸ್‌ಗೆ ಅಲ್ಲಮನೇ ಕಾರಣ ಇರಬಹುದಾ?**

ನನಗೆ ಬಹಳ ವರ್ಷಗಳಿಂದ ಒಂದು ಗೊಂದಲ ಕಾಡುತ್ತಿತ್ತು. ಎಡಪಂಥೀಯ ನಿಲುವನ್ನು ಇಟ್ಟುಕೊಂಡ, ಆಂಟಿ ಎಸ್ಟಾಬ್ಲಿಷ್‌ಮೆಂಟ್ ಧೋರಣೆಯ, ಭಾರತೀಯ ಭೌತವಾದದ ತತ್ವಗಳನ್ನು ಅರ್ಥ ಮಾಡಿಕೊಂಡ ಒಬ್ಬ ವ್ಯಕ್ತಿ ನಿಜಕ್ಕೂ ಅಧ್ಯಾತ್ಮವಾದಿಯಾಗೋದಕ್ಕೆ ಹೇಗೆ ಸಾಧ್ಯವಾಗುತ್ತೆ ಎನ್ನುವುದು. ಸುಲಭಕ್ಕೆ ಬಗೆಹರಿಸಿಕೊಳ್ಳಲಾಗದ ಕಠಿಣ ಜಿಜ್ಞಾಸೆ ಅದು. ನನ್ನ ಹೋರಾಟ ಹಾಗೂ ಸಾಹಿತ್ಯದ ಒಡನಾಟದಲ್ಲಿ ನಾನು ಈ ಗೊಂದಲವನ್ನು ಬಗೆಹರಿಸಿಕೊಂಡೆ. ಲೋಹಿಯಾರ ಸೌಂದರ್ಯ ಜಿಜ್ಞಾಸೆ, ಅಂಬೇಡ್ಕರ್, ದೇವಿಪ್ರಸಾದ್ ಚಟ್ಟೋಪಾಧ್ಯಾಯ ಹಾಗೂ ಶ್ರಮಣ ಪರಂಪರೆಯ ತಾತ್ವಿಕತೆಯ ಆಪ್ತತೆ, ಸಾಮಾಜಿಕ ಹೋರಾಟದ ನೈತಿಕತೆಗೆ ಇರಬಹುದಾದ ಆಧ್ಯಾತ್ಮಿಕ ಮುಖದ ಅಗತ್ಯ ಬಣ್ಣಗಳನ್ನು ಕ್ರಮೇಣ ತುಂಬಿಕೊಟ್ಟವು. ಅದೊಂದು ರೀತಿಯ ಮೆಟಫಿಸಿಕಲ್ ಅಪ್ರೋಚ್. ಈ ಥರದ ಮೆಟಫಿಸಿಕಲ್ ಅಪ್ರೋಚ್‌ಗಳಿಂದಲೇ ಈ ದೇಶದಲ್ಲಿದ್ದ ಎಲ್ಲ ಅನುಭಾವಿ ಕವಿಗಳು ರೂಪುಗೊಂಡದ್ದು. ಅಲ್ಲಮ, ಕಬೀರ್, ಶಿಶುನಾಳ ಶರೀಫ, ಲಲ್ಲಾದೇಡ್ ಇವರೆಲ್ಲರೂ ಕೂಡ ಮಿಸ್ಟಿಕ್ ಪೊಯೆಟ್ಸ್. ವಚನಕಾರರಲ್ಲಿ ಅನೇಕರು ಅನುಭಾವಿ ಕವಿಗಳಾಗಿದ್ದರು. ಕನ್ನಡದ ಯಾವ ಕವಿಯಲ್ಲೂ ಕಾಣದ ದಾರ್ಶನಿಕತೆಯನ್ನು ನಾನು ಅಲ್ಲಮನಲ್ಲಿ ನೋಡಿದ್ದೇನೆ. 'ಕೋಣನ ಕೊಂಬಿನ ತುದಿಯಲ್ಲಿ ಏಳುನೂರ ಪಟ್ಟಣಗಳು' ಎನ್ನುವಂಥ ಗ್ರಹಿಕೆ ಬ್ಲಾಕ್ ಹೋಲ್ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಅಲ್ಲಮನ ದಾರ್ಶನಿಕತೆಯನ್ನು ಮಂಡಿಸುವಷ್ಟು ಸಮರ್ಥವಾಗಿದೆ. ಸೂಜಿಮೊನೆ